ಇಸ್ತಿಹಾರ್‌ನಾಮೆ.

ತಾರೀಖು 24ನೆ ಮಾರ್ಚ್ 1909.

ನಂ. 9283—ಮ್ಯು. 322-08-3, 1909ನೆ ಇಸವಿ ಜನವರಿ 25ನೆ ನಂಬ್ರ ೦ 6859 ಮ್ಯು. 322-08-1ನೆ ನಂ ಬರಿನ ಇಸ್ತಿಹಾರ್‌ನಾಮೆಯ ಮೂಲಕ ಪ್ರಸಿದ್ಧಪಡಿಸಿರುವ ಮ್ಯುನಿಸಿಪಲ್ ಚುನಾವಣೆ ನಿಬಂಧನೆಗಳಲ್ಲಿ ಇದರಡಿ ಕಂಡ ಬದಲಾವಣೆ ಗಳನ್ನು ಮಾಡಿ ಹೆಚ್ಚು ಅಂಶಗಳನ್ನು ಸೇರಿಸಬೇಕು.

1. 4ನೆ ನಿಬಂಧನೆಯಲ್ಲಿ :—

(a) (vi) ಮತ್ತು (vii)ನೆ ಪ್ಯಾರಾಗಳನ್ನು ಕ್ರಮವಾಗಿ (vii) (a) ಮತ್ತು (viii)ನೆ ಪ್ಯಾರಾಗಳೆನ್ನಾಗಿ ಮಾ ಡಿಕೊಳ್ಳಬೇಕು, ಮತ್ತು (v)ನೆ ಪ್ಯಾರಾವಿನ 2ನೆ ಪಬ್ಲಿಯ ನಂತರ ಇದರಡಿ ಕಂಡ ಪ್ಯಾರಾವನ್ನು ಹೊಸದಾಗಿ ದಾಖಲ್ಮಾಡಿಕೊಳ್ಳಬೇಕು.

"(vi) ಪ್ರತಿ ಮ್ಯುನಿಸಿಪಾಲಿಟಿಯ ವಿಷಯದಲ್ಲಿಯೂ ಸರ್ಕಾರದವರು ವಿಧಾಯಕ ಮಾಡುವ ಮೊಬಲಗಿಗೆ ಕಮ್ಮಿ ಇಲ್ಲದ ಜಮಿನು ಕಂದಾಯವನ್ನು (ಅಥವಾ ಪರಭಾರೆ ಮಾಡಲ್ಪಟ್ಟ ಜಮಿನಾಗಿದ್ದಲ್ಲಿ, ಹಾಗೆ ಪರಭಾರೆಯಾಗದಿ ದ್ದರೆ ಎಷ್ಟು ಕಂದಾಯ ಕೊಡಬೇಕಾಗುತ್ತಿತ್ತೋ ಅಷ್ಟು ಕಂದಾಯವನ್ನು) ಕೊಡುವಂಥಾ ಹಿಡುವಳಿಯುಳ್ಳ ರಿಜಸ್ಟರಾದ ಜಮಿನುದಾರರುಗಳು."

(b) ತಿದ್ದುಪಡಿಯಾದ (vii) (a) ಪ್ಯಾರಾನಂತರ ಇದರಡಿ ಕಂಡ ಬಳಿ ಪ್ಯಾರಾವನ್ನು ಹೊಸದಾಗಿ ಸೇರಿಸಿಕೊಳ್ಳಬೇಕು.

"(b) ಮೇಲೆ ನಮೂದಿಸಿರುವ ಕಾಲದಲ್ಲಿ ಕಟ್ಟಡಗಳ ಮಾಲೀಕರಾಗಿ, ಭೋಗ್ಯದಾರರುಗಳಾಗಿ ಅಥವಾ ಬಾಡಿಗೆ ಕೊಡತಕ್ಕವರಾಗಿ ಇದ್ದು ಕೊಂಡು ಅವುಗಳಿಗಾಗಿ ಮೇಲ್ಕಂಡ ಪ್ಯಾರಾವಿನಲ್ಲಿ ವಿಧಾಯಿಸಿರುವ ಮೊಬ ಲಗಿಗೆ ಕಮ್ಮಿ ಇಲ್ಲದ ತೆರಿಗೆಯನ್ನು ಸದರಿ ಕಟ್ಟಡಕ್ಕಾಗಿ ಪಾವತಿ ಮಾಡಿರುವ ಜನಗಳು."

2. 6ನೆ ನಿಬಂಧನೆಯಲ್ಲಿ :—

(a) (i)ನೆ ಪ್ಯಾರಾವಿನ (e) ಮತ್ತು (f) ಎಂಬ ಬಳಿ ಪ್ಯಾರಾಗಳನ್ನು (f) (i) ಮತ್ತು (g) ಎಂಬದಾಗಿ ಗುರ್ತು ಮಾಡಿಕೊಂಡು (d) ಉಪ ಪ್ಯಾರಾನಂತರ ಇದರಡಿ ಕಾಣಿಸಿರುವದನ್ನು ಸೇರಿಸಿಕೊಳ್ಳಬೇಕು.

"(e) ಪ್ರತಿ ಮ್ಯುನಿಸಿಪಾಲಿಟಿಯ ವಿಷಯದಲ್ಲಿಯೂ ಸರ್ಕಾರದವರು ವಿಧಾಯಕ ಮಾಡುವ ಮೊಬಲಗಿಗೆ ಕಮ್ಮಿ ಇಲ್ಲದ ಕಂದಾಯವನ್ನು (ಅಥವಾ ಪರಭಾರೆಯಾದ ಜಮಿನಾಗಿದ್ದಲ್ಲಿ, ಹಾಗೆ ಪರಭಾರೆಯಾಗದಿದ್ದರೆ ಎಷ್ಟು ಕಂದಾಯ ಕೊಡಬೇಕಾಗುತ್ತಿತ್ತೋ ಅಷ್ಟು ಕಂದಾಯವನ್ನು) ಕೊಡುವಂಥಾ ಹಿಡುವಳಿ ಯುಳ್ಳ ರಿಜಸ್ಟರಾದ ಜಮಿನುದಾರರುಗಳು."

(b) ತಿದ್ದುಪಡಿಯಾದ (i)ನೆ ಬಳಿ ಪ್ಯಾರಾನಂತರ ಇದರಡಿ ನಮೂದಿಸಿರುವುದನ್ನು ಸೇರಿಸಿಕೊಳ್ಳಬೇಕು :—

"(2) ಮಾಲೀಕರಾಗಿ, ಭೋಗ್ಯದಾರರಾಗಿ ಅಥವಾ ಬಾಡಿಗೆದಾರರಾಗಿ ಕಟ್ಟಡಗಳಲ್ಲಿದ್ದುಕೊಂಡು ಅವುಗಳಿಗಾಗಿ ಮೇ ಲ್ಕಂಡ ಬಳಿ ಪ್ಯಾರಾವೀರೆಗೆ ವಿಧಾಯಕವಾದ ಮೊಬಲಗಿಗೆ ಕಮ್ಮಿ ಇಲ್ಲದ ತೆರಿಗೆಯನ್ನು ಪಾವತಿ ಮಾಡಿರುವ ಜನಗಳು."

ತಾರೀಖು 24ನೆ ಮಾರ್ಚ್ 1909.

ನಂ. 9284—ಮ್ಯು. 322-08-4, ಸ್ ಈ 1909ನೆ ಇಸವಿಯ ಜನವರಿ 25ನೆ ತಾರೀಖಿನ 6839 ಮ್ಯು. 322-08-1ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ ಪ್ರಕಟಿಸಲ್ಪಟ್ಟ ನೆ ಮರ್ಕು ೦ ನೆ ನಂಬರಿನ ಇಸ್ತಿಹಾರ್‌ನಾಮೆಯಮೂಲಕ ತಿದ್ದುಪಾಟಾದ ಮ್ಯುನಿಸಿಪಲ್ ಚುನಾವಣೆಯ ನಿಬಂಧನೆಗಳ 4ನೆ ನಿಬಂಧನೆಯ VI ಮತ್ತು VII (a)ನೆ ಪ್ಯಾರಾಗಳನ್ನೂ 6ನೆ ನಿಬಂಧನೆಯ 1ನೆ ಪ್ಯಾರಾವಿನ (e) ಮತ್ತು (f) (1) ಬಳಿ ಪ್ಯಾರಾಗಳನ್ನು ಅನು ಸರಿಸಿ, ಮ್ಯುನಿಸಿಪಲ್ ಮೆಂಬರುಗಳಿಗಾಗಿ ವೋಟು ಯಾ ಸಮ್ಮತಿ ಕೊಡುವವರಾಗಿಯೂ ಮೆಂಬರುಗಳಾಗಿರಲು ಉಮೇದುವಾರರಾಗಿ ಯೂ, ಇರುವವರ ಪಟ್ಟಿಯಲ್ಲಿ ದಾಖಲಾಗಲು ಅರ್ಹರಾಗುವುದಕ್ಕೆ ಕನಿಷ್ಟಪಕ್ಷ ಕೊಡಬೇಕಾಗುವ ತೆರಿಗೆಯನ್ನು ಈ ಕೆಳಗೆ ಕಾಣಿಸಿರುವಂತೆ ನಿಷ್ಕರ್ಷೆ ಮಾಡಿ, ಮೈಸೂರು ಶ್ರೀಮತ್ ಮಹಾರಾಜಾ ಸಾಹೇಬ್ಬಹದ್ದೂರ್‌ರವರ ಸರ್ಕಾರದವರು ಹುಕುಂ ದಯ ಪಾಲಿಸಿರುತ್ತಾರೆ :—

ಬಾಬುಗಳು	4ನೇ ನಿಬಂಧನೆಯ ಉದ್ದೇಶಕ್ಕಾಗಿ ಕೊಡಬೇಕಾದ ಮೊಬಲಗು	6ನೇ ನಿಬಂಧನೆಯ ಉದ್ದೇಶಕ್ಕಾಗಿ ಕೊಡಬೇಕಾದ ಮೊಬಲಗು
ಜಮ್ಮಿ ಕಂದಾಯ ...	ಬೆಂಗಳೂರು ಅಥವಾ ಮೈಸೂರು ಸಿಟಿ ಮ್ಯುನಿಸಿಪಾಲಿಟಿಗಳಲ್ಲಿ 5ರೂ. ಇತರ ಮ್ಯುನಿಸಿಪಾಲಿಟಿಗಳಲ್ಲಿ $2\frac{1}{2}$ರೂ.	ಬೆಂಗಳೂರು ಅಥವಾ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ 10ರೂ. ಇತರ ಮ್ಯುನಿಸಿಪಾಲಿಟಿಗಳಲ್ಲಿ 5ರೂ.
ಮ್ಯುನಿಸಿಪಲ್ ತೆರಿಗೆ (ಸೊಹತಫಾ ದೇಖೀಲು) ...	ಬೆಂಗಳೂರು ಅಥವಾ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ $2\frac{1}{2}$ರೂ. ಇತರ ಮ್ಯುನಿಸಿಪಾಲಿಟಿಗಳಲ್ಲಿ 1ರೂ.	ಬೆಂಗಳೂರು ಅಥವಾ ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ 5ರೂ. ಇತರ ಮ್ಯುನಿಸಿಪಾಲಿಟಿಗಳಲ್ಲಿ $2\frac{1}{2}$ರೂ.

ಹುಕುಂ ಬಮೋಜೇಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯು ಸೆಕ್ರಿಟರಿ.